(68)

157ನೇ ಅಧಿ

ನಿಯಮ 330ರ ಮೇರೆಗೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ, ಶ್ರೀ ಸಿ.ಟಿ. ರವಿ, ಶ್ರೀ ರವಿಕುಮಾರ್ ಎಸ್. ಶ್ರೀ ಹಣಮಂತ ನಿರಾಣಿ, ಶ್ರೀ ಭೋಜೇಗೌಡ, ಶ್ರೀ ಡಿ.ಎಸ್. ಅರುಣ್, ಶ್ರೀ ನವೀನ್, ಶ್ರೀ ಕೇಶವ ಪ್ರಸಾದ್, ಶ್ರೀಮತಿ ಭಾರತಿ ಶೆಟ್ಟಿ ಹಾಗೂ ಇತರರು ಮಂಡಿಸಿರುವ ಸೂಚನೆಗೆ ಉತ್ತರ

"ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಭ್ರಷ್ಟಾಚಾರ ಹಾಗೂ ವರ್ಗಾವಣೆ ದಂದೆ, ಕಮಿಷನ್ ಸಂಸ್ಕೃತಿ, ಕಾಸಿಗಾಗಿ ಪೋಸ್ಟಿಂಗ್ ಹಾಗೂ ಇನ್ನಿತರ ಹಗರಣಗಳು ಮಿತಿಮೀರಿರುವುದರಿಂದ, ಸರ್ಕಾರದ ಆಡಳಿತ ಯಂತ್ರ ಸಂಪೂರ್ಣ ಹಾಳಾಗಿರುವ ಗಂಭೀರ ಪರಿಸ್ಥಿತಿ ಪ್ರಸ್ತುತ ರಾಜ್ಯದಲ್ಲಿ ನಿರ್ಮಾಣವಾಗಿದೆ. ಸರ್ಕಾರಿ ಅಧಿಕಾರಿಗಳ ನಿರ್ಲಕ್ಷ್ಯ, ಗುತ್ತಿಗೆದಾರರ ಲಾಬಿ, ಕಮಿಷನ್ ಸಂಸ್ಕೃತಿ, ಫಲಾನುಭವಿಗಳ ಆಯ್ಕೆಯಿಂದಿಡಿದು ಯಾವುದೇ ಯೋಜನೆಗಳ ಕಮಿಷನ್ ಇಲ್ಲದೇ ಕೆಲಸವಾಗುತ್ತಿಲ್ಲ ಮತ್ತು ಜನಸೇವೆಗೆ ಬೇಕಾದ ವ್ಯವಸ್ಥೆಗಳ ದುರ್ಬಲತೆಗಳಿಂದ ಸರ್ಕಾರದ ಮೇಲಿರುವ ಸಾರ್ವಜನಿಕರ ವಿಶ್ವಾಸ ಕುಸಿಯುತ್ತಿದೆ. ಯೋಜನೆಗಳ ಅನುಷ್ಠಾನಕ್ಕೆ ಭ್ರಷ್ಟಾಚಾರವೇ ಮುಖ್ಯ ಅಡ್ಡಿಯಾಗಿದ್ದು, ಜನರಿಗೆ ಸಿಗಬೇಕಾದ ಅನುಕೂಲಗಳು ಮರಿಚಿಕೆಯಾಗಿವೆ. ಹೀಗಾಗಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ."

* * * * *

<u>ಉತ್ತರ</u>:

ರಾಜ್ಯದಲ್ಲಿ ಸರ್ಕಾರಿ ನೌಕರರ ವರ್ಗಾವಣೆಗಳನ್ನು ನಿಯಂತ್ರಿಸಿ ಆಡಳಿತದಲ್ಲಿ ಹೆಚ್ಚಿನ ಹೊಣೆಗಾರಿಕೆ ಮತ್ತು ಪಾರದರ್ಶಕತೆ ತರಲು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 14 ಸೇನೌವ 2025, ದಿನಾಂಕ:12.05.2025 ರನ್ವಯ ವರ್ಗಾವಣೆ ಮಾರ್ಗಸೂಚಿಗಳನ್ನು ನೀಡಲಾಗಿದೆ. ಸದರಿ ಆದೇಶದನ್ವಯ 2025-26ನೇ ಸಾಲಿನ ಸಾರ್ವತ್ರಿಕ ವರ್ಗಾವಣೆಗಳನ್ನು ಕೈಗೊಳ್ಳಲಾಗಿರುತ್ತದೆ. ಸಾರ್ವತ್ರಿಕ ವರ್ಗಾವಣೆ ಅವಧಿಯು ಮುಕ್ತಾಯಗೊಂಡ ನಂತರ ವಿರಳ ಪ್ರಕರಣಗಳಲ್ಲಿ ವರ್ಗಾವಣೆಯು ಅವಶ್ಯಕವಿದ್ದಲ್ಲಿ ಸದರಿ ದಿನಾಂಕ:12.05.2025 ರ ಆದೇಶದನ್ವಯ ಮಾನ್ಯ ಮುಖ್ಯಮಂತ್ರಿಯವರ ಪೂರ್ವಾನುಮೋದನೆಯನ್ನು ಪಡೆದುಕೊಂಡ ನಂತರ ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಪಾರದರ್ಶಕವಾಗಿ ವರ್ಗಾವಣೆ ಮಾಡಲಾಗುತ್ತಿದೆ.

ರಾಜ್ಯದಲ್ಲಿ ನಾಗರೀಕರಿಗೆ ಗೊತ್ತುಪಡಿಸಿದ ಕಾಲಮಿತಿಯೊಳಗೆ ಸೇವೆಗಳ ಖಾತರಿಯನ್ನು ಒದಗಿಸುವ ಉದ್ದೇಶದಿಂದ **ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011** ಮತ್ತು **ಕರ್ನಾಟಕ ಸಕಾಲ ಸೇವೆಗಳ ನಿಯಮಗಳು, 2012** ಗಳನ್ನು ಜಾರಿಗೊಳಿಸಲಾಗಿದ್ದು, ಸದರಿ ಅಧಿನಿಯಮ/ನಿಯಮಗಳನ್ವಯ ನಾಗರೀಕರಿಗೆ ಆಯ್ದ ಸೇವೆಗಳನ್ನು ನಿಗದಿತ ಕಾಲಮಿತಿಯೊಳಗೆ ಒದಗಿಸಲು ಕ್ರಮವಹಿಸಲಾಗುತ್ತಿದೆ.

ರಾಜ್ಯದಲ್ಲಿ **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999** ಮತ್ತು **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000** ಗಳು ಜಾರಿಯಲ್ಲಿದ್ದು, ಸದರಿ ಅಧಿನಿಯಮ/ನಿಯಮಗಳನ್ವಯ ಎಲ್ಲಾ ಟೆಂಡರ್ ಪ್ರಕ್ರಿಯೆಗಳನ್ನು ಅನುಸರಿಸಿ, ಪಾರದರ್ಶಕವಾಗಿ ಕಾಮಗಾರಿಗಳ ಗುತ್ತಿಗೆಯನ್ನು ನೀಡಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಸಿಆಸುಇ 208 ಸೇಲೋಯು 2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ